

ಕಬಿನಿಗೆ ಹೆಚ್ಚು ಜನ ಚಿರತೆ, ಹುಲಿ ನೋಡುವ ಆಸೆಯಿಂದ ಬರುತ್ತಾರೆ. ಈ ಕಾಡಿನ ಯಾನವೇ ಒಂದರ್ಥದಲ್ಲಿ ದುಬಾರಿ ದುನಿಯಾ. ಇಲ್ಲಿಗೆ ಕಾಸಿಗೆ ಬೆಲೆಯಿಲ್ಲ. ಸಾಮಾನ್ಯ ಜನರ್ಯಾರೂ ಇಲ್ಲಿ ಜಾಸ್ತಿ ದಿನವಿದ್ದು ಫೋಟೊಗ್ರಫಿ ಮಾಡುವುದು ಬಿಲ್ಕುಲ್ ಸಾಧ್ಯವಿಲ್ಲದ ಮಾತು. ಮನೆ, ಜಮೀನು, ನಗ ನಾಣ್ಯ ಎಲ್ಲಾ ಮಾರಿಕೊಂಡೇ ಇಲ್ಲಿಗೆ ಬರಬೇಕು. ಇನ್ನು ದುರಾಸೆ ಮಾಡಿಕೊಂಡರೆ ಇರುವ ಎರಡು ಕಿಡ್ನಿಗಳನ್ನೂ ಹರಾಜಿಗಿಡಬೇಕಾದೀತು. ನಾವಂತೂ ಆಸೆ ಮತ್ತು ಕಾತರದಿಂದ ಬಳಕುವ ಜೀಪಿನಲ್ಲಿ ಕೂತು ಮರಗಳನ್ನೇ ದಿಟ್ಟಿಸಿ ನೋಡುತ್ತಿದ್ದೆವು.

ಸಂಜೆ ಹೊತ್ತು ಮರಗಳ ಮೇಲೆ ಚಿರತೆಗಳು ಸಿಗುವ ಅವಕಾಶ ತುಸು ಹೆಚ್ಚು. ವಿಶ್ರಾಂತಿಗಾಗಿ ಅವು ಮರದ ಬಾಗಿದ ಟೊಂಗೆಯನ್ನು ಆಶ್ರಯಿಸುತ್ತವೆ. ಜತೆಗೆ ಬೇಟೆಯ ಚಲನವಲನಗಳ ಮೇಲೂ ನಿಗಾ ಇಡಲು ಈ ಎತ್ತರದ ಸ್ಥಳ ಇವಕ್ಕೆ ಉಪಯುಕ್ತ. ಕೊನೆಗೆ ಅದು ತನ್ನ ಬೇಟೆಯ ಬಲಿಗಳನ್ನು ಹೊತ್ತೊಯ್ಯುವುದು ದೊಡ್ಡ ಮರಗಳ ಮೇಲೆಕ್ಕೇನೆ. ಇದರೊಟ್ಟಿಗೆ ಹಸಿರು ಮರಗಳ ನಡುವೆ ಹುದುಗಿ ಕುಳಿತ ಚಿರತೆಯನ್ನು ತಕ್ಷಣ ಗುರುತಿಸುವುದು ಕೊಂಚ ಕಷ್ಟದ ಕೆಲಸ. ಜೋರಾಗಿ ಚಲಿಸುವ ಜೀಪಿನಲ್ಲಿ ಇದು ಅಸಾಧ್ಯದ ಮಾತು.

ಬೇಸರದಿಂದ ಏನೇನೂ ಸಿಗದ ನಿರಾಶೆಯ ನಡುವೆ ಗೆಳೆಯ ಪುಷ್ಪರಾಜ ಒಮ್ಮೆಲೇ ಗಾಬರಿಯಿಂದ ಕೂಗಿದ್ದು ಕೇಳಿಸಿತು. ಆತ ನನ್ನ ಹಿಂದೆ ಕುಳಿತಿದ್ದ. ತೊಟ್ಟಿಲಂತೆ ತೂಗುವ ಜೀಪಿನ ನಡಿಗೆಗೆ ಕೊಂಚ ತೂಕಡಿಕೆಗೆ ಜಾರಿದ್ದ ಅವನು ಸಾರ್ ಲೆಪರ್ಡ್, ಲೆಪರ್ಡ್, ಸಾರ್ ಲೆಪರ್ಡ್ ಎಂದು ಕೋರ್ಟಿನಲ್ಲಿ ಕರೆಯುವಂತೆ ಮೂರು ಸಲ ಕೂಗಿದ. ನಿದ್ದೆ ಮಂಪರಿನಲ್ಲಿ ಕನಸು ಕಂಡಿರಬೇಕೆಂದು ನಾವೆಲ್ಲಾ ನಕ್ಕೆವು. ಆದರವನು ಖಚಿತವಾಗಿದ್ದ. ಕೆಂಗಣ್ಣು ಬಿಟ್ಟು ಪ್ರಾಮಿಸ್ ಲೆಪರ್ಡ್ ಎಂದು ಹಿಂದಿನ ಮರಗಳತ್ತ ಕೈ ತೋರಿಸಿದ. ತಕ್ಷಣವೇ ಜೀಪು ಹಿಂದಕ್ಕೆ ತಿರುಗಿಸುವಂತೆ ಡ್ರೈವರ್ ಗೆ ಹೇಳಿದೆವು. ಆತ ರಿವರ್ಸ್